ಮುಖ್ಯವಾದದ್ದೆಂದರೆ ಮೊದಲನೆಯದ್ದು ಸ್ಕ್ರಿಪ್ಟ್ ಅಥವಾ ಕಥೆ, ಎರಡನೆಯದ್ದು ವೇಷಭೂಷಣ, ಮೂರನೆಯದ್ದು ಪ್ರಸ್ತುತಿ. ಸಾಮಾನ್ಯವಾಗಿ ಪೌರಾಣಿಕ ಕಥೆಗಳನ್ನೇ ಆಯ್ದುಕೊಳ್ಳುವುದು ವಾಡಿಕೆ. ಕೃಷ್ಣ, ರಾಧೆ, ವಿಷ್ಣು, ಪಾರ್ವತಿ, ಇಂದ್ರ... ಹೀಗೆ ಅನೇಕ ಪಾತ್ರಗಳು ಕಥೆಯಲ್ಲಿರುತ್ತಿದ್ದವು. ಇತರ ಕಥೆಗಳಿಗೆ ನರ್ತಿಸಿದ್ದೇ ಇಲ್ಲ. ಆದರೆ ಗುರೂಜಿ ಹೇಳುವ ಪ್ರಕಾರ, ಕಥಕ್ ಅಂದರೆ ಕಥೆ ಹೇಳುವುದು. ಹಾಗಿದ್ದರೆ ಬೇರೆ ಕಥೆಗಳನ್ನೂ ನಾವು ಹೇಳಬಹುದಲ್ಲವೇ? ನಾನು ಪೌರಾಣಿಕ ಕಥೆಯ ಗುಂಗಿನಿಂದ ಹೊರಬಂದು ಇಂದಿನ ಸಮಾಜದ ಕಥೆಯನ್ನು ಆಯ್ಕೆ ಮಾಡಿಕೊಳ್ಳಬಹುದೇ ಎಂದು ಯೋಚಿಸಿದೆ. ಹೀಗೆ ಯೋಚಿಸಿದಾಗ ನನಗೆ ಹೊಸಕಥೆಯೇನೂ ಹೊಳೆಯಲಿಲ್ಲ. ಆದರೆ ಹೊಸವಿಚಾರವೊಂದು ಮನಸ್ಸನ್ನು ಹೊಕ್ಕಿತು. ಎಲ್ಲಿಂದಲಾದರೂ ಕಥೆಯನ್ನು ಯಾಕೆ ಹೊತ್ತು ತರಬೇಕು. ಪ್ರತಿಯೊಬ್ಬರ ಮನದಲ್ಲಿಯೂ ಕಥೆಯಿರುತ್ತದೆ. ನನ್ನ ನೃತ್ಯದ ಮೂಲಕ ಪ್ರೇಕ್ಷಕರೇ ತಮ್ಮ ಮನದೊಳಗಿರುವ ಕಥೆಯನ್ನು ಯಾಕೆ ಹೆಕ್ಕಿಕೊಳ್ಳಬಾರದು? ಆಗೆಲ್ಲ ಅಮೂರ್ತ (abstract) ಚಿತ್ರಕಲೆಗಳು ಜನಪ್ರಿಯವಾಗಿದ್ದನ್ನು ಗಮನಿಸಿದ್ದೆ. ಹಾಗಿದ್ದರೆ ಅಮೂರ್ತ ನೃತ್ಯವೊಂದು ವೇದಿಕೆಯಲ್ಲಿ ಹೇಗೆ ಪ್ರಸ್ತುತಗೊಳ್ಳಬಹುದು ಎಂದು ಯೋಚಿಸಿದೆ. ಇದು ಹೇಗಿತ್ತೆಂದರೆ, ನಾವೇನೂ ಸಿದ್ಧ ಮಾದರಿಯ ಕಥೆಯನ್ನು ಹೇಳುವುದಿಲ್ಲ. ನೃತ್ಯ ನೋಡುತ್ತ ಪ್ರೇಕ್ಷಕರು ತಮ್ಮೊಳಗಿನ ಕಥೆಯನ್ನು ಹುಡುಕಿಕೊಳ್ಳಬೇಕು. ಒಂದುವೇಳೆ ಅವರಿಗೆ ಯಾವುದೇ ಕಥೆ ಕಾಣಿಸದೇ ಇದ್ದರೆ ಬೇಡ ಬಿಡಿ... ಅವರವರ ಭಾವಕ್ಕೆ ಒಂದು ಅವಕಾಶವನ್ನು ನೃತ್ಯವು ಕಲ್ಪಿಸಬಹುದಾದರೆ ಹೇಗೆ? ಈ ಆಲೋಚನೆಯೊಂದಿಗೆ ರೂಪುಗೊಂಡಿದ್ದು ಧಬ್‌ಕರ್. ಅಂದರೆ ನಾಡಿಬಡಿತ. ಕಥಕ್‌ನ ನಾಡಿಬಡಿತ ಎಲ್ಲಿದೆ? ಹೆಜ್ಜೆಯಲ್ಲಿದೆಯೇ? ವೇಷಭೂಷಣದಲ್ಲಿದೆಯೇ? ಕೈಗಳ ಚಲನೆಯಲ್ಲಿದೆಯೇ?

ಅವುಗಳ ಪರಿಕಲ್ಪನೆಯು ಭಿನ್ನವಾಗಿತ್ತು. ವೇದಿಕೆಯಲ್ಲಿ ಮೂರು ಹಂತಗಳನ್ನು ಮೊತ್ತ ಮೊದಲ ಬಾರಿಗೆ ಪರಿಚಯಿಸಿ, ಅದರ ಮೇಲೆ ನೃತ್ಯಪಟುಗಳು ನರ್ತಿಸುವಂತೆ ಮಾಡಿದೆ. ಹಾಗೆ ನರ್ತಿಸುವಾಗ ಕಲಾವಿದರ ಕೈಗಳ ಚಲನೆಯು ಹೊಸ ವಿನ್ಯಾಸವನ್ನು ರೂಪಿಸಿ ಪ್ರೇಕ್ಷಕರ ಮೇಲೆ ಪರಿಣಾಮ ಬೀರುವಂತೆ ಮಾಡಿದೆ. ಇನ್ನು ನರ್ತಿಸುವಾಗ ತೊಡಕಾಗುವ ದುಪ್ಪಟ್ಟ, ಒಂದಷ್ಟು ಬಳೆಗಳು ಬೇಡವೆಂದು ನಿರ್ಧರಿಸಿದೆ. ನಾನು ರಾಮ್ ಜೊತೆ ಸ್ಪಾನಿಷ್ ನೃತ್ಯ ನೋಡಿದ್ದನ್ನು ನೆನಪಿಸಿಕೊಂಡು ವೇಷಭೂಷಣದಲ್ಲಿ ಕೆಲವೊಂದು ಬದಲಾವಣೆ ಮಾಡಿದೆ. ಆದರೆ ಕಲಾವಿದರ ವೇಷದಲ್ಲಿ ದುಪ್ಪಟ್ಟ ಕೈಬಿಟ್ಟಿದ್ದನ್ನು ಗಮನಿಸಿದವರು ಸಿಕ್ಕಾಪಟ್ಟೆ ಟೀಕಿಸಿದರು. 'ನಾಚಿಕೆ ಮರೆತವರು ದುಪ್ಪಟ್ಟವಿಲ್ಲದೆ ನರ್ತಿಸುತ್ತಿದ್ದಾರೆ', 'ಎಲ್ಲರೂ ಬೆಳ್ಳನೆಯ ದಿರಿಸು ಹಾಕಿ, ಶ್ರದ್ಧಾಂಜಲಿ ಸಭೆಗೆ ಹೊರಟದ್ದಾರೆಯೇ..'ಎಂಬೆಲ್ಲ ಟೀಕೆಗಳು ಜೋರಾಗಿಯೇ ವ್ಯಕ್ತವಾದವು. ಹೀಗೆ ಕಥೆಯಿಲ್ಲದ ಹಾಡಿಗೆ ಮಾಡಿದ ನೃತ್ಯವು ಭರ್ಜರಿ ಯಶಸ್ಸು ಕಂಡಿತು. ಇತ್ತೀಚೆಗೆ ಧಬ್‌ಕರ್‌ನ ಐವತ್ತನೇ ವರ್ಷಾಚರಣೆಯನ್ನೂ ಶಿಷ್ಯವೃಂದದವರು ಮಾಡಿದ್ದು ನೋಡಿ ಖುಷಿ ಆಗಿದೆ.

ಸಾಮಾನ್ಯ ಗೃಹಿಣಿಯೊಬ್ಬಳ ಮನಸ್ಥಿತಿಯನ್ನು ಬಿಂಬಿಸುವ 'ಧುವಿಧಾ' ಎಂಬ ಪ್ರಸ್ತುತಿಯನ್ನು ಮಾಡಿದೆ. ಆರಂಭದಲ್ಲಿ ಭಾರೀ ಟೀಕೆ ವ್ಯಕ್ತವಾಯಿತು. 'ಅಥ ಕಿಮ್?' ಎನ್ನುವ ಇನ್ನೊಂದು ಪರಿಕಲ್ಪನೆಯು ನನ್ನ ಅಂತರಂಗದ ಪ್ರಶ್ನೆ. ಈ ಹೆಜ್ಜೆಯನ್ನು ಇಲ್ಲಿಟ್ಟಾಯಿತು, ಮುಂದೆಲ್ಲಿ ಇಡಲಿ? ಜೀವನದ ಪ್ರತಿಕ್ಷಣದ ಪ್ರಶ್ನೆಯದು. ಈ ದೀರ್ಘ ಪ್ರಯಾಣ, ಇಷ್ಟು ದೊಡ್ಡ ಜಗತ್ತಿನಲ್ಲಿ ನಾನು ಮುಂದಿನ ಹೆಜ್ಜೆಯನ್ನು ಎಲ್ಲಿ ಇಡಬೇಕು, ಅಥವಾ ಆ ಬಗ್ಗೆ ಯೋಚಿಸಬೇಕೇ ಬೇಡವೇ? ಇಂದಿಗೂ ಗೊತ್ತಿಲ್ಲ ನನಗೆ. ಆದರೆ ಆ ನೃತ್ಯಪ್ರಸ್ತುತಿಯು ಬಹಳ ಜನಪ್ರಿಯವಾದುದು ನಿಜ. ಬಹುಶಃ ಅದು ಎಲ್ಲರೊಳಗಿನ ಪ್ರಶ್ನೆಯಾಗಿರಬಹುದು.

ಹೀಗೆ ಅನೇಕ ಹೊಸ ಪರಿಕಲ್ಪನೆಗಳನ್ನು ಹೆಣೆದಿರುವೆ. ಈಗೆಲ್ಲ ಮರೆತುಹೋಗಿದೆ. ಕೆಲವೊಮ್ಮೆ ಯಾರಾದರೂ ಹುಡುಗಿಯರು ಒಂದು ನೃತ್ಯದ ತುಣುಕನ್ನು ಪ್ರಸ್ತುತಪಡಿಸಿದಾಗ, ಬಹಳ ಇಷ್ಟವಾಗಿ, ಇದನ್ನೆಲ್ಲಿ ಕಲಿತೆ ಎಂದು ಪ್ರಶ್ನಿಸುತ್ತೇನೆ. 'ನಿಮ್ಮದೇ ನೃತ್ಯಸಂಯೋಜನೆಯಿದು... ' ಎಂದು ಹೇಳುತ್ತಾರೆ. ಓ ಹೌದೇ... ಎಂದು ಸುಮ್ಮನಾಗುತ್ತೇನೆ. ನನಗೀಗ ಏನೂ ಬೇಗನೇ ನೆನಪಾಗುವುದಿಲ್ಲ. ಆದರೆ ಅವರ ಮಾತು ಕೇಳಿಸಿಕೊಂಡಾಗ ಮನಸ್ಸಿಗೆ ಬಹಳ ಖುಷಿಯಾಗುತ್ತದೆ.

●